
# ಶೀರ್ಷಿಕೆ 14 – ಸಮಮಿತಿ

**ಕಲಿಕಾಫಲ 14 : ಎರಡು ಆಯಾಮದಲ್ಲಿ ಭ್ರಮಣ ಮತ್ತು ಪ್ರತಿಫಲನ ಸಮಮಿತಿಯನ್ನು ಗುರುತಿಸುವರು.**

## ಚಟುವಟಿಕೆ 14.1 ಸಮಮಿತಿ ಅಕ್ಷಗಳು

1) ಮುಂದೆ ನೀಡಿರುವ ಚಿತ್ರಗಳು ಸಮಮಿತಿ ಅಕ್ಷ ಹೊಂದಿದ್ದರೆ, ಸಮಮಿತಿ ಅಕ್ಷಗಳನ್ನು ಬಿಡಿಸಿರಿ.





2) ಸಮಮಿತಿ ಅಕ್ಷಗಳನ್ನು ಹೊಂದಿರುವ ಆಂಗ್ಲ ವರ್ಣಮಾಲೆಯ ದೊಡ್ಡ ಅಕ್ಷರ ಮತ್ತು ಅಂಕಿಗಳನ್ನು ವರ್ಗೀಕರಿಸಿ.

ಅಡ್ಡ ಸಮಮಿತಿ ಅಕ್ಷವನ್ನು ಹೊಂದಿರುವ ಅಕ್ಷರಗಳು/ಅಂಕಿಗಳು B, C, D, E, H, I, K, O, X

ಲಂಬ ಸಮಮಿತಿ ಅಕ್ಷವನ್ನು ಹೊಂದಿರುವ ಅಕ್ಷರಗಳು/ಅಂಕಿಗಳು A, H, I, M, O, T, U, V, W, X,


ನಿತ್ಯ ಜೀವನದಲ್ಲಿ ಉಪಯೋಗಿಸುವ ಯಾವುದಾದರೂ ವಸ್ತುಗಳು ಸಮಮಿತಿ ಅಕ್ಷವನ್ನು ಹೊಂದಿದ್ದರೆ, ಅವುಗಳನ್ನು ಪಟ್ಟಿ ಮಾಡಿ, ಚಿತ್ರಿಸಿ.



ಪೆನ್ಸಿಲ್, ಪೆನ್ನು ಕೋನಮಾಪಕ,

## ಚಟುವಟಿಕೆ 14.2 ಸಮಮಿತಿ ಅಕೃತಿಗಳನ್ನು ಪೂರ್ಣಗೊಳಿಸೋಣ!

1) ಉದಾಹರಣೆಯಂತೆ ಸಮಮಿತಿ ಅಕ್ಷ/ಅಕ್ಷಗಳು ಹೊಂದಿರುವ ಚಿತ್ರಗಳನ್ನು ಪೂರ್ಣಗೊಳಿಸಿ.




**ಚಿತ್ರದ ಎರಡು ಭಾಗಗಳು ಸಮ್ಮಿತಿಳಿತವಾಗುವಂತೆ, ಚಿತ್ರವನ್ನು ಮಡಚುವ ರೇಖೆಯಿದ್ದರೆ, ಆ ಚಿತ್ರಕ್ಕೆ ರೇಖಾ ಸಮಮಿತಿ ಇರುತ್ತದೆ.**

2) ಡೇವಿಡ್ ಶಾಲೆಯಿಂದ ಮನೆಗೆ ಹಿಂದಿರುಗುವಾಗ ತಾನು ವೀಕ್ಷಿಸಿದ ಟ್ರಾಫಿಕ್ ಚಿಹ್ನೆಗಳನ್ನು ಕೆಳಗಿನಂತೆ ಗುರುತು ಮಾಡಿಕೊಂಡನು. ಈ ಚಿಹ್ನೆಗಳ ಸಮಮಿತಿ ಅಕ್ಷಗಳನ್ನು ಬಿಡಿಸಿರಿ.




**ನಿಯತ ಬಹುಭುಜಾಕೃತಿಗಳಿಗೆ, ಬಾಹುಗಳ ಸಂಖ್ಯೆಯಷ್ಟು ಸಮಮಿತಿ ರೇಖೆಗಳು ಇರುತ್ತವೆ.**

## ಚಟುವಟಿಕೆ 14.3 ದರ್ಪಣದಲ್ಲಿ ಅಕ್ಷರ ಮತ್ತು ಅಂಕಿಗಳು

* ಈ ಚಟುವಟಿಕೆಯನ್ನು ಮಾಡಲು ನಿಮ್ಮ ಶಾಲೆಯ ನಲಿಕಲಿ ತರಗತಿಯ ಇಂಗ್ಲಿಷ್ ಭಾಷೆಯ 26 ಇಂಗ್ಲಿಷ್ ಅಕ್ಷರಗಳ ಮಿಂಚು ಪಟ್ಟಿಗಳನ್ನು ಮತ್ತು ಸೊನ್ನೆಯಿಂದ ಒಂಭತ್ತರ ವರೆಗಿನ ಅಂಕಿಗಳ ಮಿಂಚು ಪಟ್ಟಿಗಳನ್ನು ತೆಗೆದುಕೊಳ್ಳಿ.
* ಅಕ್ಷರ ಮತ್ತು ಸಂಖ್ಯೆಗಳು ಕಾಣುವಂತೆ ಮಿಂಚು ಪಟ್ಟಿಗಳನ್ನು ಟೇಬಲ್ ಮೇಲೆ ಇಡಿ. ವಿದ್ಯಾರ್ಥಿಗಳು ಒಂದೊಂದು ಮಿಂಚು ಪಟ್ಟಿಯನ್ನು ತೆಗೆದುಕೊಂಡು, ಅದರ ಎಡಭಾಗದಲ್ಲಿ ದರ್ಪಣವನ್ನು ಇರಿಸಿ, ದರ್ಪಣದಲ್ಲಿನ ಪ್ರತಿಫಲನವನ್ನು ಗಮನಿಸಿ ಕೋಷ್ಟಕದಲ್ಲಿ ಚಿತ್ರಿಸಿ.
* ಕೋಷ್ಟಕದಲ್ಲಿ ತೋರಿಸಿರುವಂತೆ ಮಿಂಚು ಪಟ್ಟಿಗಳ ನಾಲ್ಕು ಅಂಚುಗಳಲ್ಲಿ ದರ್ಪಣವನ್ನು ಇಟ್ಟು ಪ್ರತಿಫಲನದ ಚಿತ್ರವನ್ನು ಚಿತ್ರಿಸಿ.

| ಮಿಂಚು ಪಟ್ಟಿಯಲ್ಲಿರುವ ಅಕ್ಷರ | ದರ್ಪಣದ ಸ್ಥಾನಕ್ಕೆ ಅನುಗುಣವಾಗಿ ಉಂಟಾಗಿರುವ ಪ್ರತಿಬಿಂಬಗಳು | | | |
|---|---|---|---|---|
| | ಬಲ | ಎಡ | ಮೇಲೆ | ಕೆಳಗೆ |
| A | A | A | ∀ | ∀ |
| B | B | B | B | B |
| C | Ɔ | Ɔ | C | C |
| D | ᗡ | ᗡ | D | D |
| E | Ǝ | Ǝ | E | E |

| ಮಿಂಚು ಪಟ್ಟಿಯಲ್ಲಿರುವ ಅಂಕಿ | ದರ್ಪಣದ ಸ್ಥಾನಕ್ಕೆ ಅನುಗುಣವಾಗಿ ಉಂಟಾಗಿರುವ ಪ್ರತಿಬಿಂಬಗಳು | | | |
|---|---|---|---|---|
| | ಬಲ | ಎಡ | ಮೇಲೆ | ಕೆಳಗೆ |
| 3 | Ɛ | Ɛ | 3 | 3 |
| 4 | ᔭ | ᔭ | ᔭ | ᔭ |
| 5 | ट | ट | S | S |
| 6 | ∂ | ∂ | ρ | ρ |
| 7 | ⌐ | ⌐ | ⅃ | ⅃ |



ದರ್ಪಣವು ಅದೃಶ್ಯವೆಂದು ಪರಿಗಣಿಸಿದರೆ, ಯಾವ ಅಕ್ಷರ ಅಥವಾ ಅಂಕಿಗಳ ಪ್ರತಿಬಿಂಬಗಳು ದರ್ಪಣದ ರೇಖೆಗೆ ಸಂಬಂಧಿಸಿದಂತೆ ಸಮಮಿತಿಯನ್ನು ಹೊಂದಿವೆ? ನಿಮ್ಮ ತೀರ್ಮಾನವನ್ನು ಬರೆಯಿರಿ.

A H I M O T U V W X

## ಚಟುವಟಿಕೆ 14.4

* ಕಾರ್ಡ್ ಬೋರ್ಡ್/ಹಾಳೆಯ ತುಂಡನ್ನು ತೆಗೆದುಕೊಂಡು, ಅದನ್ನು ಆಯತಾಕಾರವಾಗಿ ಕತ್ತರಿಸಿ. ಕೆಳಗೆ ತೋರಿಸಿದಂತೆ ಆಯತವನ್ನು ನಾಲ್ಕು ಸಮಭಾಗಗಳನ್ನಾಗಿ ವಿಭಾಗಿಸಿ, ಪ್ರತಿ ಭಾಗಕ್ಕೆ ಬೇರೆ-ಬೇರೆ ಬಣ್ಣಗಳನ್ನು ಹಚ್ಚಿ.
* ಈಗ ಬಣ್ಣ ಹಚ್ಚಲಾದ ಕಾರ್ಡ್ ಬೋರ್ಡ್‌ನ ಚೌಕಕಾರದ ತುಣುಕನ್ನು ಮೇಜಿನ ಮೇಲೆ ಇರಿಸಿ, ಅದನ್ನು ಆರನೇ ಒಂದು ಭಾಗದಷ್ಟು ನಿಧಾನವಾಗಿ ತಿರುಗಿಸಿ. ನಂತರ, ತಿರುಗಿಸಿದ ಆಕೃತಿಯು ಮೂಲ ಆಕೃತಿಯಾಗಿದೆಯೇ ಎಂಬುದನ್ನು ಕೋಷ್ಟಕದಲ್ಲಿ ಬರೆಯಿರಿ. ಅದೇ ರೀತಿ, ಬಣ್ಣ ಹಚ್ಚಿದ ಕಾರ್ಡ್ ಬೋರ್ಡ್/ಹಾಳೆಯನ್ನು ನಾಲ್ಕನೆಯ ಒಂದು ಸುತ್ತು, ಮೂರನೇಯ ಒಂದು ಸುತ್ತು, ಅರ್ಧ ಸುತ್ತು ಮತ್ತು ಒಂದು ಪೂರ್ಣ ಸುತ್ತಿನಷ್ಟು ತಿರುಗಿಸಿ, ಆಕೃತಿಯು ಎಷ್ಟು ತಿರುಗುವಿಕೆಯ ನಂತರ ಮೂಲ ಆಕೃತಿಯನ್ನು ಹೋಲುತ್ತದೆ ಎಂದು ಪರಿಶೀಲಿಸಿ, ಕೋಷ್ಟಕದಲ್ಲಿ ಬರೆಯಿರಿ.


| ಮೂಲ ಆಕೃತಿ | ಸುತ್ತುಗಳು | ಉಲ್ಲೇಖಿತ ರೇಖಾಚಿತ್ರ | ತಿರುಗಿಸಲಾದ ಚಿತ್ರ | ಮೂಲ ಆಕೃತಿಯನ್ನು ಹೋಲುವುದೇ? (ಹೌದು/ಇಲ್ಲ) |
|---|---|---|---|---|
|  | 1/6 ನೇ ಸುತ್ತು |  |  | ಇಲ್ಲ |

|  | 1/4 ನೇ ಸುತ್ತು |  |  | ಇಲ್ಲ. |
|---|---|---|---|---|

> ಪರಿಭ್ರಮಣೆಯು ವಸ್ತುವನ್ನು ಸ್ಥಿರಬಿಂದುವಿನ ಸುತ್ತಾ ತಿರುಗಿಸುತ್ತದೆ. ಈ ಸ್ಥಿರಬಿಂದುವೇ ಪರಿಭ್ರಮಣೆಯ ಕೇಂದ್ರ, ವಸ್ತುವು ಪರಿಭ್ರಮಿಸುವ ಕೋನವನ್ನು ಪರಿಭ್ರಮಣ ಕೋನ ಎನ್ನುತ್ತಾರೆ.
> ಒಂದು ಪೂರ್ಣ ಸುತ್ತಿನಲ್ಲಿ ಆಕೃತಿಯೊಂದು ಎಷ್ಟು ಬಾರಿ ಮೊದಲಿನಂತೆಯೇ ಕಾಣಿಸುತ್ತದೆಯೋ ಅದನ್ನು ಪರಭ್ರಮಣ ಸಮಮಿತಿಯ ಕ್ರಮ ಎನ್ನುತ್ತಾರೆ.


## ಚಟುವಟಿಕೆ 14.5

1) ಮುಂದಿನ ಆಕೃತಿಗಳು ಸಮಮಿತಿಯಾಗಿದ್ದರೆ ಕೋಷ್ಟಕದಲ್ಲಿ "✓" ಗುರುತು ಹಾಕಿರಿ.





| ಆಕೃತಿ ಸಂಖ್ಯೆ | (i) | (ii) | (iii) | (iv) |
|---|---|---|---|---|
| ರೇಖಾ ಸಮಮಿತಿ ಹೊಂದಿದೆಯೇ? | ✓ | ✓ | ✓ | ✗ |
| ಪರಿಭ್ರಮಣಾ ಸಮಮಿತಿ ಹೊಂದಿದೆಯೇ? | ✓ | ✓ | ✓ | ✓ |

2) ಈ ಆಕೃತಿಗಳ ಪರಿಭ್ರಮಣಾ ಕೇಂದ್ರವನ್ನು ಗುರುತಿಸಿ, ಕೋಷ್ಟಕವನ್ನು ಪೂರ್ಣಗೊಳಿಸಿ.




| ಪರಿಭ್ರಮಣಾ ಸಮಮಿತಿ ಕ್ರಮ | 4 | 3 | 5 |
|---|---|---|---|
| ಪರಿಭ್ರಮಣಾ ಕೋನ | 90° | 120° | 72° |


3) ಮುಂದಿನ ಆಕೃತಿಗಳು ಗುರುತಿಸಿದ "x" ಬಿಂದುವನ್ನು ಪರಿಭಮಣಾ ಕೇಂದ್ರವಾಗಿ ಹೊಂದಿದ್ದು, 4 ರ ಕ್ರಮದ ಪರಿಭ್ರಮಣಾ ಸಮಮಿತಿಯನ್ನು ಹೊಂದಿರುವಂತೆ ಪೂರ್ಣಗೊಳಿಸಿ.




**ನಾನೇನು ಕಲಿತೆ? (✓ ಗುರುತು ಹಾಕಿರಿ)**

**ಸ್ತರ 1– ಆಕೃತಿಗಳಿಗೆ ಸಮಮಿತಿ ಅಕ್ಷಗಳನ್ನು ರಚಿಸುವೆನು.**



1) ಚಿತ್ರದಲ್ಲಿನ ಆಕೃತಿಗಳಿಗೆ ಎಲ್ಲಾ ಸಮಮಿತಿ ರೇಖೆ (ಅಕ್ಷ)ಗಳನ್ನು ರಚಿಸಿ:



2) ಸಮಮಿತಿ ಅಕ್ಷಗಳುಳ್ಳ ಇಂಗ್ಲೀಷ್ ಅಕ್ಷರಗಳನ್ನು ಬರೆಯಿರಿ. A, B, C, D, E, H, I, M, [illegible], O, T, U, [illegible] X



**ಸ್ತರ 2– ಪರಿಭ್ರಮಣಾ ಸಮಮಿತಿ ಹೊಂದಿರುವ ಆಕೃತಿಗಳ ಪರಿಭ್ರಮಣಾ ಕೇಂದ್ರವನ್ನು ಗುರುತಿಸುವೆನು ಮತ್ತು ಪರಿಭ್ರಮಣಾ ಕ್ರಮವನ್ನು ಕಂಡುಹಿಡಿಯುವೆನು.**

3) ನೀಡಲಾದ ಪ್ರತಿಯೊಂದು ಆಕೃತಿಗೆ ಅದರ ಮೂಲ ಆಕಾರವನ್ನು ಹೋಲಲು ಅಗತ್ಯವಿರುವ ಪರಿಭ್ರಮಣಾ ಕೋನ ಮತ್ತು ಪರಿಭ್ರಮಣೆಯ ಕ್ರಮವನ್ನು ಕಂಡುಹಿಡಿಯಿರಿ.

| | | |
|---|---|---|
| i)  | ii)  | iii)  |
| ಪರಿಭ್ರಮಣಾ ಕ್ರಮ: 2 | ಪರಿಭ್ರಮಣಾ ಕ್ರಮ: 1 | ಪರಿಭ್ರಮಣಾ ಕ್ರಮ: 5 |
| ಪರಿಭ್ರಮಣಾ ಕೋನ: 180° | ಪರಿಭ್ರಮಣಾ ಕೋನ: 360° | ಪರಿಭ್ರಮಣಾ ಕೋನ: 72° |


**ಸ್ತರ 3– ಅಪೂರ್ಣವಾದ ಸಮಮಿತಿ ಆಕೃತಿಗಳನ್ನು ಪೂರ್ಣಗೊಳಿಸುವೆನು.**

4) ಸಮಮಿತಿ ರೇಖೆಯನ್ನು ಬಳಸಿಕೊಂಡು ಚಿತ್ರಗಳ ಉಳಿದ ಅರ್ಧ ಭಾಗವನ್ನು ಪೂರ್ಣಗೊಳಿಸಿ. (ಸೂಚನೆ: ಬಿಂದುಗಳ ರೇಖೆಯು ಸಮಮಿತಿ ರೇಖೆಯಾಗಿದೆ)


| | | |
|---|---|---|
| i)  | ii)  | iii)  |

**ಸ್ತರ 4– ನಿತ್ಯ ಜೀವನದಲ್ಲಿ ಸಮಮಿತಿಯನ್ನು ಬಳಸಿ ಸಮಸ್ಯೆಗಳನ್ನು ಪರಿಹರಿಸುವೆನು.**

5) ಚಿತ್ರದಲ್ಲಿ ತೋರಿಸಿದಂತೆ ಸಮಮಿತಿ ರೇಖೆಯನ್ನು ಹೊಂದಿರದ, ಆದರೆ 4 ರ ಕ್ರಮದ ಪರಿಭ್ರಮಣಾ ಸಮಮಿತಿಯನ್ನು ಹೊಂದಿರುವ ಬೇರೆ ಎರಡು ಆಕೃತಿಗಳನ್ನು ಚಿತ್ರಿಸಿ.







ಶಿಕ್ಷಕರ ಹಿಮ್ಮಾಹಿತಿ

ದಿನಾಂಕ:

ಶಿಕ್ಷಕರ ಸಹಿ